**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.198/2021

**PW**. 4

**CW**. 8

**ಸಾಕ್ಷಿಯ ಹೆಸರು –ಪ್ರಭಾಕರ ನಾಯಕ ಜೆ**

**ತಂದೆಯ ಹೆಸರು –ಸಿದ್ಧನಾಯಕ**

**ವಯಸ್ಸು –53 ವರ್ಷಗಳು** ದಿನಾಂಕ 18–03–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಎ ಇ , ಪಿಡಬ್ಲ್ಯೂ ಇಂಜಿನಿಯರ್**

**ವಾಸಸ್ಥಳ –ಹುಣಸೂರು**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಕಳೆದ 8 ವರ್ಷಗಳಿಂದ ಹುಣಸೂರು ವಿಭಾಗ ಪಿಡಬ್ಲ್ಯೂಡಿ ನಲ್ಲಿ ಎ.ಇ ಆಗಿ ಸೇವೆ ಸಲ್ಲಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 15–12–2020 ರಂದು ನಮ್ಮ ಕಛೇರಿಗೆ ಹುಣಸೂರು ಗ್ರಾಮಾಂತರ ಪೊಲೀಸರು ಸಲ್ಲಿಸಿದ ಕೋರಿಕೆಯ ಮೇರೆಗೆ ನಮ್ಮ ಎ.ಇ.ಇ ರವರ ಸೂಚನೆಯ ಮೇರೆಗೆ ದಿಃ 08–01–2021 ರಂದು ಹುಣಸೂರು ಪೊಲೀಸರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ನಾಕಶೆಯನ್ನು ತಯಾರಿಸಿ ನಮ್ಮ ಎ.ಇ.ಇ ರವರಿಗೆ ನೀಡಿದ್ದು, ಅವರು ಪೊಲೀಸರಿಗೆ ಕವಚ ಪತ್ರದೊಂದಿಗೆ ಕಳುಹಿಸಿಕೊಟ್ಟಿದ್ದಾರೆ. ಸದರಿ ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–11 ಎಂದು ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಕೃತ್ಯ ನಡೆದ ಸ್ಥಳವನ್ನು ನಿಪಿ–11(ಬಿ) ಎಂದು ಗುರುತಿಸಲಾಯಿತು. ಸದರಿ ಕವಚ ಪತ್ರವನ್ನು ನಿಪಿ–12 ಎಂದು, ಅದರ ಮೇಲಿರುವ ಎ.ಇ.ಇ ರವರ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು.

**SC No.198/2021**
**PW. 4**

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ನಿಪಿ–11 ರಲ್ಲಿ ತೋರಿಸಿರುವ ನಿಪಿ–11(ಬಿ) ರಸ್ತೆಯು ಹುಣಸೂರು ತಲಕಾವೇರಿಯ ರಸ್ತೆಯ ದೇವರಾಜು ಕಾಲೋನಿ ಪಕ್ಕದಲ್ಲಿರುತ್ತದೆ. ಕೃತ್ಯ ನಡೆದ ಸ್ಥಳದಲ್ಲಿ ಅಂಗಡಿ ಮಳಿಗೆಗಳಿವೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ನಾಲ್ಕು ರಸ್ತೆಗಳು ಸೇರುತ್ತವೆ ಎಂದರೆ ಸರಿಯಲ್ಲ. ನಿಪಿ–11 ರಲ್ಲಿ ಸ್ಥಳಕ್ಕೆ ಹೋಗಿದ್ದ ಸಮಯ ನಮೂದು ಮಾಡಿಲ್ಲ ಎಂದರೆ ಸರಿ . ನಿಪಿ–11 ಅನ್ನು ನಮ್ಮ ಕಛೇರಿಯಲ್ಲಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ನಕಾಶೆಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.